ವೆರಿಫೈ ಮಾಡಿದೆ. ರಾಗೀಗುಡ್ಡಕ್ಕೆ ಬಸ್ಸು ಹೋಗುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ರೂಟ್ ಸರ್ವೆ ಮತ್ತೆ ಮಾಡಿದಾಗ ಏನು ಅಬ್‌ಸ್ಟ್ರಕ್ಷನ್ ಇಲ್ಲದಿದ್ದರೆ ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ. ಹೊಸ ಕಾರ್ಯಕ್ರಮಗಳು ಅಂದರೆ ಎರಡು ಬಸ್ಸುಗಳನ್ನು ಹೆಚ್ಚು ಮಾಡುತ್ತಿದ್ದೇವೆ. ಗೈಡ್ ಮತ್ತು ಅನೌನ್ಸರ್ ಇಟ್ಟು ಪಾಸ್‌ಗಳನ್ನು ಕೊಟ್ಟು ಎಲ್ಲಿಬೇಕಾದರೂ ಬಸ್ ಹತ್ತಬಹುದು. ವಿಧಾನಸೌಧದ ಹತ್ತಿರ ಅದು ಬರುತ್ತದೆ. ವಿಧಾನಸೌಧದ ಹತ್ತಿರ ಇಳಿದು ಎರಡು ಗಂಟೆ ಇರಬಹುದು. ಮತ್ತೇ ಅದೇ ಬಸ್ಸು ಬಂದಾಗ ಹತ್ತಿ ಹೋಗಬಹುದು. ಲಂಡನ್‌ನಲ್ಲಿ ಆ ರೀತಿ ಮಾಡಿದ್ದಾರೆ. ಅದನ್ನು ಎಕ್ಸ್‌ಪೀರಿಮೆಂಟ್ ಆಗಿ ಮಾಡಬೇಕೆಂದು ಮಾಡುತ್ತಿದ್ದೇವೆ. ಅದು ಸಕ್ಸಸ್ ಆಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಅದು ಸಕ್ಸಸ್ ಆಗುತ್ತಿದೆ. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟಿಕೊಂಡಿದ್ದೇವೆ. ಲಾಲ್‌ಬಾಗ್‌ಗೆ ಕೂಡ ಹೋಗಬೇಕೆಂದು ಮಾಡುತ್ತಿದ್ದೇವೆ.

ದೇವಸ್ಥಾನಗಳ ಫಂಡಿನಿಂದ ನೌಕರರ ನೇಮಕಾತಿ

46(176) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಪಟ್ಟ ದೇವಸ್ಥಾನಗಳ ಫಂಡಿನಿಂದ ಕೆಲವು ನೌಕರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೆಲಸಕ್ಕೆ ನೇರವಾಗಿ ತೆಗೆದುಕೊಳ್ಳುವ ಉದ್ದೇಶವೇನು; ವಿವರ ನೀಡುವುದು;

ಇ) ಅವರು ಕೆಲಸ ಮಾಡುವ ಕಾರ್ಯ ಕ್ಷೇತ್ರ ಯಾವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ), ಆ) ಹೌದು, ದೇವಸ್ಥಾನದ ದೈನಂದಿನ ಕಾರ್ಯ ನಿರ್ವಹಣೆಯ ಸಲುವಾಗಿ ಅವಶ್ಯಕ ನೌಕರರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಈ ನೌಕರರ ಸಂಬಳವನ್ನು ದೇವಾಲಯದ ನಿಧಿಯಿಂದ ಭರಿಸಲಾಗುವುದು.

ಇ) ಸಂಬಂಧಪಟ್ಟ ದೇವಸ್ಥಾನಗಳು.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೆ, ತಾವು ನನ್ನ ಸಹಾಯಕ್ಕೆ ಬರಬೇಕಾಗಿದೆ. ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ದೇವಾಲಯದ ದೈನಂದಿನ ಕಾರ್ಯಕ್ರಮದ ಸಲುವಾಗಿ ಅವಶ್ಯಕ ನೌಕರರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಲಿಕ್ಕೆ ಅವಕಾಶವಿದೆಯೆಂದು ಹೇಳಿದ್ದಾರೆ. ನೂರಕ್ಕೂ ಮಿಕ್ಕಿ ಹೆಚ್ಚು ನೌಕರರನ್ನು ಮುಜರಾಯಿ ಇಲಾಖೆಯ ಮಂತ್ರಿಗಳು ನೇಮಕ ಮಾಡಿ ಆಜ್ಞೆ ಹೊರಡಿಸಿದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಎರಡನೇ ದರ್ಜೆ ಗುಮಾಸ್ತರಾಗಿ ನೇಮಕಾತಿ

ಮಾಡಿಸಿದ್ದಾರೆ. ಅವರ ಸಂಬಳವನ್ನು ದೇವಸ್ಥಾನದವರು ಕೊಡಬೇಕೆಂದು ಮಾಡಿದ್ದಾರೆ. ಬೆಂಗಳೂರಿನಲ್ಲಿ ಎರಡು ದೇವಾಲಯದವರು ಈಗಾಗಲೇ ಇದರ ಬಗ್ಗೆ ಕೋರ್ಟ್‌ಗೆ ಹೋಗಿದ್ದಾರೆ. ನಿಯಮಗಳನ್ನು ಕೇವಲ ಬೆಂಗಳೂರು ಮತ್ತು ಮೈಸೂರಿಗೆ ಮಾತ್ರ ಸೀಮಿತಗೊಳಿಸಿದ್ದಾರೆ. ಅದರ ಜೊತೆಗೆ ಏನು ಮಾಡಿದ್ದಾರೆ ಅಂದರೆ ಅವರು ಕೆಲಸ ಮಾಡುವ ಕ್ಷೇತ್ರ ಯಾವುದು ಅಂದರೆ ದೇವಾಲಯಗಳಿಗೆ ಸಂಬಂಧಪಟ್ಟಿದ್ದು ಎಂದು ಹೇಳಿದ್ದಾರೆ. ನೇಮಕಾತಿಯನ್ನು ಮಾಡಿ ಮಂತ್ರಿಗಳ ಕಛೇರಿಯಲ್ಲಿ ಒಬ್ಬರನ್ನು ಇಟ್ಟುಕೊಂಡಿದ್ದಾರೆ. ಎಂಡೋಮೆಂಟ್ ಕಮಿಷನರ್‌ರವರು ಕಛೇರಿಯಲ್ಲಿ ಒಬ್ಬರು ಇದ್ದಾರೆ. ಕಾರ್ಯದರ್ಶಿಯವರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರೆ ನೀವು ಕೊಟ್ಟ ಉತ್ತರ ಏನೆಂದು ದಯವಿಟ್ಟು ತಿಳಿಸಿ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಭಾಪತಿಯವರು ಏನು ಹೇಳಿದ್ದಾರೆಂದರೆ ಸತ್ಯಕ್ಕೆ ದೂರವಾದ ಉತ್ತರ ಕೊಟ್ಟಿದ್ದಾರೆಂದು ಹೇಳಿದ್ದಾರೆ. ನಾವು 20 ಜನರನ್ನು ರೆಗ್ಯೂಲರೈಸ್ ಮಾಡಿದ್ದೇವೆ ಅಷ್ಟೆ. ಅವರಿಗೆ ಕಡಿಮೆ ಸಂಬಳ ಬರುತ್ತಿತ್ತು ದೇವಾಲಯಗಳಲ್ಲಿ ಆದಾಯ ಹೆಚ್ಚಿರುವುದರಿಂದ ಅವರಿಗೆ ಅನುಕೂಲವಾಗಲಿಯೆಂದು ಈ ತುಟ್ಟಿ ಕಾಲದಲ್ಲಿ ಜೀವನ ಮಾಡುವುದು ಕಷ್ಟವಾಗುತ್ತದೆಂದು ಹೇಳಿ ದೇವಾಲಯಗಳ ಆದಾಯಕ್ಕನುಗುಣವಾಗಿ ನೇಮಕ ಮಾಡಿದ್ದೇವೆ. ಯಾರನ್ನೂ ಖಾಯಂ ಮಾಡಿಲ್ಲ ಹೆಚ್ಚಿಗೆ ತೆಗೆದುಕೊಂಡಿಲ್ಲವೆಂದು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು.ಆರ್. ಸಭಾಪತಿ:- ಮುಜರಾಯಿ ಇಲಾಖೆಯ ಮಂತ್ರಿಗಳು ನೇಮಕ ಮಾಡಲಿಕ್ಕೆ ಅವಕಾಶ ಇದೆಯೇ? ಒಂದು ವೇಳೆ ನೇಮಕಾತಿಯನ್ನು ಮಾಡುವುದು ಇದ್ದರೂ ರೋಸ್ಟರ್ ಪ್ರಕಾರ ಮಾಡುವುದು ಇದೆ. ಅದನ್ನು ಮಾಡಲಿಲ್ಲ. ನಿಯಮಬಾಹಿರವಾಗಿ ಎಲ್ಲೆಲ್ಲೋ ಕೆಲಸ ಮಾಡಿಸಲಿಕ್ಕೆ ಇವರು ನೇಮಕ ಮಾಡಿ ಇವರ ಕಛೇರಿಯಲ್ಲಿ ಒಬ್ಬರನ್ನು ಇಟ್ಟುಕೊಂಡಿದ್ದಾರೆ ಅದಕ್ಕೆ ಏನು ಉತ್ತರ ಕೊಡುತ್ತಾರೆ ಕೊಡಲಿ. ಎಂಡೋಮೆಂಟ್ ಕಮಿಷನರ್‌ರವರ ಕಛೇರಿಯಲ್ಲಿ ಮತ್ತು ಕಾರ್ಯದರ್ಶಿಯವರ ಕಛೇರಿಯಲ್ಲಿ 10-15 ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಮುನಿಯಪ್ಪ ಮುದ್ದಪ್ಪ:- ಮಾನ್ಯ ಅಧ್ಯಕ್ಷರೆ, ಈಗ ನಾವು ಅದರ ಬಗ್ಗೆ ಆಲೋಚನೆಯನ್ನು ಮಾಡಿ ದೇವಾಲಯದ ದುಡ್ಡಿನಿಂದಲೇ ಸಂಬಳ ಬರತಕ್ಕ ವ್ಯವಸ್ಥೆ ಮಾಡಿದ್ದೇವೆ. 50 ವರ್ಷಗಳಿಂದ ಅದೇ ವ್ಯವಸ್ಥೆಯಲ್ಲಿದ್ದರು. ಈಗ ನಾವು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಜಂಟಿ ಸಲಹಾ ರಚನೆ ಮಾಡಿ ಏಕರೂಪ ಶಾಸನದ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಸರ್ಕಾರವೇ ಸಂಬಳವನ್ನು ಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿಯ ತನಕ ದೇವಾಲಯದ ಆದಾಯದಿಂದಲೇ ಅವರಿಗೆ ಸಂಬಳ ಕೊಡುತ್ತಿದ್ದೇವೆ ಎನ್ನುವುದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು.ಆರ್. ಸಭಾಪತಿ:- ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡಲಿಲ್ಲ. ನೀವು ಅವರನ್ನು ದೇವಾಲಯದ ಕೆಲಸಕ್ಕೆ ಇಡುವುದು ಎಂದು ಹೇಳಿದ್ದೀರಿ. ನಿಮ್ಮ ಕಛೇರಿಯಲ್ಲಿ ನೇಮಕ ಮಾಡಿ ಅವರಿಗೆ ದೇವಾಲಯದವರು ಏಕೆ ಸಂಬಳ ಕೊಡಬೇಕು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ:- ದೇವಾಲಯದಲ್ಲಿ ಕೆಲಸ ಮಾಡುತಕ್ಕವರನ್ನು ಆಪ್ತ ಸಹಾಯಕರಾಗಿ ತೆಗೆದುಕೊಳ್ಳಬಾರದೆಂದು ಕಾನೂನು ಇಲ್ಲ. ನಾವೇನೂ ಸಂಬಳವನ್ನು ಅವರಿಗೆ ನಮ್ಮ ಇಲಾಖೆಯಿಂದ ಕೊಡುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ: ದೇವಾಲಯದಲ್ಲಿ ನೇಮಕಾತಿ ಮಾಡಿದ ಒಬ್ಬ ವ್ಯಕ್ತಿ ತಮ್ಮಲ್ಲಿ ಇದ್ದಾರೋ ಇಲ್ಲವೋ ಅದಕ್ಕೆ ಉತ್ತರ ಕೊಡಿ.

ಶ್ರೀ ಮುನಿಯಪ್ಪ ಮುದ್ದಪ್ಪ: ನಾವು ಹೊಸದಾಗಿ ಯಾರನ್ನೂ ನೇಮಕಾತಿ ಮಾಡಿಲ್ಲ.

ಶ್ರೀ ಯು.ಆರ್. ಸಭಾಪತಿ: ಹೊಸದಾಗಿ ನೇಮಕಾತಿ ಮಾಡುವುದಿಲ್ಲ. ನೀವು ಈಗಾಗಲೇ ನೇಮಕಾತಿ ಮಾಡಿರುವವರಲ್ಲಿ ಒಬ್ಬರು ನಿಮ್ಮ ಕಛೇರಿಯಲ್ಲಿದ್ದಾರೋ ಇಲ್ಲವೋ ಅದನ್ನು ಹೇಳಿ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಹೌದು ಇದ್ದಾರೆ. ಮಾಹಿತಿಯ ಸಲುವಾಗಿ ತೆಗೆದುಕೊಂಡಿದ್ದೇವೆ. ಇದರಲ್ಲಿ ಏನೂ ಕಳ್ಳತನವಿಲ್ಲ.

ಶ್ರೀ ಯು.ಆರ್. ಸಭಾಪತಿ: ಯಾವ ದೇವಾಲಯದವರು ಇವರ ಕಛೇರಿಯಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡಬೇಕು?

ಅಧ್ಯಕ್ಷರು: ದೇವಾಲಯದ ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಮುಜರಾಯಿ ಮಂತ್ರಿಗಳು ಇದರಲ್ಲಿ ಕೆಲಸ ಗೊತ್ತಿರುವವರು ಒಬ್ಬರನ್ನು ಆಪ್ತ ಸಹಾಯಕರಾಗಿ ಇಟ್ಟುಕೊಂಡಿದ್ದಾರೆ. ನೀವು ಗಲಾಟೆ ಮಾಡುವುದನ್ನು ನೋಡಿದರೆ ದೇವರನ್ನು ಇವರು ಪಿ.ಎ. ಆಗಿ ಇಟ್ಟುಕೊಂಡಹಾಗೆ ಮಾಡುತ್ತೀರಿ, ಅವರು ದೇವರನ್ನು ಇಟ್ಟುಕೊಂಡಿದ್ದಾರೆಯೆ? ಅದರಲ್ಲಿ ಕೆಲಸ ಗೊತ್ತಿರುವವರು ಒಬ್ಬರನ್ನು ಇಟ್ಟಿಕೊಂಡಿದ್ದಾರೆ. ದೇವರನ್ನು ಪಿ.ಎ. ಆಗಿ ಇಟ್ಟುಕೊಂಡಿರುವವರು ಬಹಳ ಜನರಿದ್ದಾರೆ. ಗುಮಾಸ್ತರೊಬ್ಬರನ್ನು ಇಟ್ಟುಕೊಂಡರೆ ಏಕಿಷ್ಟು ಗದ್ದಲ?

ಶ್ರೀ ಯು.ಆರ್. ಸಭಾಪತಿ: ಇದು ತಮಾಷೆಯ ಪ್ರಶ್ನೆಯಲ್ಲ. ಹಾಸ್ಯದಲ್ಲಿ ನೀವು ಇದನ್ನು ಹಾರಿಸಬಹುದು.

ಶ್ರೀ ಎಂ.ಪಿ. ಪ್ರಕಾಶ್: ದೇವಾಲಯದವರು ಸಂಬಳ ಕೊಡುವುದಿಲ್ಲ. ಸಂಬಳವನ್ನು ಸರ್ಕಾರದವರು ಕೊಡುತ್ತಾರೆ. ನಿಯೋಜನೆಯ ಮೇಲೆ ನೇಮಿಸಿಕೊಂಡಿದ್ದಾರೆ. ನನ್ನ ಆಪ್ತ ಕಾರ್ಯದರ್ಶಿಯವರೂ ಸಹ ಮುಜರಾಯಿ ಇಲಾಖೆಗೆ ಸೇರಿದವರು. ಅವರಿಗೆ ಸಂಬಳವನ್ನು ಸರ್ಕಾರದವರು ಕೊಡುತ್ತಾರೆ.

ಶ್ರೀ ಯು.ಆರ್. ಸಭಾಪತಿ: ಇಲ್ಲಿ ಸಂಬಳವನ್ನು ಸರ್ಕಾರದಿಂದ ಕೊಡುತ್ತಿಲ್ಲ.

ಅಧ್ಯಕ್ಷರು: ಸಂಬಳವನ್ನು ಯಾರಾದರೂ ಕೊಡಲಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್: ದೇವಾಲಯದಿಂದ ಸಂಬಳವನ್ನು ಕೊಡಬಾರದೆಂದು ಕಾನೂನು ಇದೆಯೇ? ದೇವಾಲಯದ ಹಣ ಜನರ ಹಣ. ಅದನ್ನು ಏಕೆ ಕೊಡಬಾರದು? ಅದು ಜನರು ಕೊಟ್ಟಿರುವ ಹಣ.

ಶ್ರೀ ಯು.ಆರ್. ಸಭಾಪತಿ: ನೇಮಕಾತಿಯ ನಿಯಮ ಒಂದು ಇದೆ. ಆ ನಿಯಮದ ಪ್ರಕಾರ ನೇಮಕಾತಿಯಾಗಬೇಕು. ನಿಯಮದ ಪ್ರಕಾರ ನೇಮಕಾತಿ ಆಗಿಲ್ಲ. ಮಂತ್ರಿಗಳು ನನ್ನ ಪ್ರಶ್ನೆಗೆ ಕೊಟ್ಟಂತಹ ಉತ್ತರ ಸತ್ಯಕ್ಕೆ ದೂರವಾದುದು. ಇವರು ಯಾವ ರೀತಿ ಇಲಾಖೆಯನ್ನು ನೋಡುತ್ತಿದ್ದಾರೆಂದು ಹೇಳುವುದಕ್ಕೆ ಉತ್ತರ ಕೊಡುವುದು ಬೇಡವೆ? ಅವರು ಈ ಸದನಕ್ಕೆ ಬದ್ಧರಲ್ಲವೆ?

ಅಧ್ಯಕ್ಷರು: ಬದ್ಧರು ಹೌದು. ನಿಯೋಜನೆಯ ಆಧಾರದ ಮೇಲೆ ದೇವಾಲಯದ ನೌಕರರೊಬ್ಬರನ್ನು ಅವರ ಆಪ್ತ ಸಿಬ್ಬಂದಿಯಲ್ಲಿಟ್ಟುಕೊಂಡರೆ ಏನು ಅಪರಾಧ? ಸಂಬಳ ಯಾರಾದರೂ ಕೊಡಲಿ.

ಶ್ರೀ ಯು.ಆರ್. ಸಭಾಪತಿ: ಪಿ.ಎ. ಆಗಿ ಇಟ್ಟುಕೊಳ್ಳಲಿಕ್ಕೆ ಎಲ್ಲಿಂದಲಾದರೂ ಡೆಪ್ಯುಟೇಷನ್ ಮಾಡಿಕೊಳ್ಳಲಿ. ದೇವಾಲಯದ ಕೆಲಸ ಮಾಡಲಿಕ್ಕೆ ನೇಮಕಾತಿ ಮಾಡಿ ಇವರು ಡೆಪ್ಯುಟೇಷನ್ ಮಾಡಿಕೊಂಡರೆ ದೇವಾಲಯದವರು ಅವರಿಗೆ ಪೇಮೆಂಟ್ ಮಾಡಬೇಕಾ? ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಲಿಕ್ಕೆ ಅವರನ್ನು ಕಳುಹಿಸಬೇಕಾ? ನನಗೆ ಬೇರೇನೂ ಇಲ್ಲ. ನಿಯಮಬಾಹಿರವಾಗಿ ನೇಮಕಾತಿಯನ್ನು ಮಾಡಿದ್ದಾರೆ ಎನ್ನುವುದು ಹೇಳುತ್ತಿದ್ದೇನೆ. ಇದು ಸರಿಯೆ?

ಅಧ್ಯಕ್ಷರು: ಮಂತ್ರಿಗಳು ಇದು ನಿಯಮಬಾಹಿರ ಅಥವಾ ಅಲ್ಲವಾ ಎಂಬುದನ್ನು ಹೇಳಿ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ನಾನು ತೆಗೆದುಕೊಂಡಿರುವವರು ಪೂಜೆ ಮಾಡತಕ್ಕ ಅರ್ಚಕರೇನ್ನೂ ಅಲ್ಲ. ನಾನು ತೆಗೆದುಕೊಂಡಿರುವುದು ಗುಮಾಸ್ತರನ್ನು ಅರ್ಚಕರನ್ನು ತೆಗೆದುಕೊಂಡಿದ್ದರೆ ಅದು ಡಿಸ್ಪರ್ಟ್ ಆಗುತ್ತದೆಂದು ಹೇಳಬಹುದಿತ್ತು. ತಾತ್ಕಾಲಿಕವಾಗಿ ಒಬ್ಬರನ್ನು ಕಾರ್ಯ ನಿರ್ವಹಿಸಲಿಕ್ಕೆ ಪಿ.ಎ. ಆಗಿ ತೆಗೆದುಕೊಂಡಿದ್ದೇನೆ.

ಶ್ರೀ ಯು.ಆರ್. ಸಭಾಪತಿ: ಮಂತ್ರಿಗಳು ತಮ್ಮ ಉತ್ತರದಲ್ಲಿ ಏನು ಹೇಳಿದ್ದಾರೆ, ನೇಮಕಾತಿಯನ್ನು ಮಾಡಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಅವಕಾಶವಿರುವುದು ಎಂದು ಹೇಳಿದ್ದಾರೆ. ಆ ರೀತಿ ಹೇಳಿ ಇವರೇ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಯಾವ ಜಿಲ್ಲಾಧಿಕಾರಿಗಳೂ ಮಾಡಿಲ್ಲ. ಕಡತ ತೆಗೆಸಿ ಯಾವ ಜಿಲ್ಲಾಧಿಕಾರಿಗಳು ಮಾಡಲಿಲ್ಲ. ಇವರೇ ನೇಮಕಾತಿಯನ್ನು ಮಾಡಲಿಕ್ಕೆ ಅಧಿಕಾರ ಇದೆಯೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ದೇವಾಲಯದ ಒಬ್ಬರನ್ನು ಪಿ.ಎ. ಆಗಿ ನೇಮಕ ಮಾಡಿಕೊಂಡು ನಿಯೋಜನೆಯ ಮೇಲೆ ಇಟ್ಟುಕೊಂಡರೆ ಏನು ತಪ್ಪಾಗುತ್ತದೆ?

ಶ್ರೀ ಯು.ಆರ್. ಸಭಾಪತಿ: ನೀವು ತಪ್ಪು ಮಾಡಿದ್ದೀರಿ ಅನ್ಯಾಯ ಮಾಡಿದ್ದೀರಿ ಎಂದು ಒಪ್ಪಿಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ಸರ್ಕಾರದ ಕೆಲಸ ದೇವರ ಕೆಲಸ. ಆದ್ದರಿಂದ ದೇವಾಲಯದ ಒಬ್ಬರನ್ನು ಪಿ.ಎ. ಆಗಿ ಇಟ್ಟುಕೊಂಡರೆ ತಪ್ಪೇನೂ ಇಲ್ಲ.

ಅಧ್ಯಕ್ಷರು: ನಾನು ಆಗಿನಿಂದ ಯೋಚನೆ ಮಾಡುತ್ತಿದ್ದೆ ನಿಮ್ಮಂತಹ ವೇದಾಂತಿಗಳು ಏಕೆ ಈ ಮಾತು ಹೇಳಲಿಲ್ಲವೆಂದು.

ಶ್ರೀ ವಾಟಾಳ್ ನಾಗರಾಜ್: ಯಾವ ಸಚಿವರ ಬಗ್ಗೆ ಯಾದರೂ ಸ್ವಲ್ಪ ಜಗಳವಾಡಬಹುದು. ದೇವರಿಗೆ ಅಧಿಪತಿಯಾಗಿರತಕ್ಕ ಸಚಿವರ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದಿರಬೇಕು. ನಮಗೂ ದೇವರ ಆಶೀರ್ವಾದ ಬೇಕಾಗುತ್ತದೆ. ಅವರ ಬಗ್ಗೆ ಹೆಚ್ಚು ಮಾತನಾಡಿದರೆ ಎಲ್ಲಾ ದೇವರನ್ನು ನಿಷ್ಪುರ ಮಾಡಿಕೊಂಡ ಹಾಗೆ ಆಗುತ್ತದೆ ಸ್ವಲ್ಪ ಜಾಗೃತರಾಗಿರಿ.

ಶ್ರೀ ಯು.ಆರ್. ಸಭಾಪತಿ: ಕಾನೂನು ಬಾಹಿರವಾಗಿ ತಾವು ನೇಮಕ ಮಾಡಿದ್ದೀರಿ ಅದಕ್ಕೆ ಏನು ಹೇಳುತ್ತೀರಿ?

ಅಧ್ಯಕ್ಷರು: ಕಾನೂನು ಬಾಹಿರವಾಗಿ ಮಾಡಿದ್ದರೆ ಅದನ್ನು ಅವರು ಸರಿಪಡಿಸುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದೇವರಿಗೆ ಕಾನೂನು ಯಾವುದೂ ಇಲ್ಲ.

ಅಧ್ಯಕ್ಷರು: ಹೌದು, ಒಂದು ಕಮಿಟಿ ಮಾಡಿ ಪಶ್ಚಿಮ ಬಂಗಾಳಕ್ಕೆ ಕಳುಹಿಸುತ್ತೇನೆ. ಅವರೊಂದು ವರದಿ ಕೊಡಲಿ. ವರದಿ ಬಂದ ಮೇಲೆ ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಆ ಕಮಿಟಿಗೆ ಅಧ್ಯಕ್ಷರನ್ನು ಯಾರನ್ನು ಮಾಡುತ್ತೀರಿ?

ಅಧ್ಯಕ್ಷರು: ರೆಡ್ಡಿಯವರನ್ನೇ ಮಾಡೋಣ.

ಕೆ.ಎಸ್. ಈಶ್ವರಪ್ಪ: ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆಯ ಒಳಗಡೆ ಮಸೀದಿಗೆ ಒಂದು ರೂಮ್ ಕೊಟ್ಟಿದ್ದಾರೆ.

ಅಧ್ಯಕ್ಷರು: ಮೊನ್ನೆಯೆಲ್ಲಾ ಬೇರೆ ಭಾಷಣ ನಿಮ್ಮದು, ಈಗ ವಾಪಸ್ಸು ಮಸೀದಿಗೆ ಹೋದಿರಿ.

ಶ್ರೀ ವಾಟಾಳ್ ನಾಗರಾಜ್: ಮೊನ್ನೆಯೆ ಚುನಾವಣೆಯಲ್ಲಿ ಮಸೀದಿ ಬಿಟ್ಟರು ರಾಮನನ್ನು ಬಿಟ್ಟರು. ನೀರು ರಸ್ತೆ ಹಿಡಿದುಕೊಂಡರು ಪುನಃ ಮತ್ತೆ ಮಸೀದಿಗೆ ಹೋಗುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಸೀದಿ, ರಾಮಮಂದಿರ ಸುದ್ದಿ ತೆಗೆದು ಕಾಂಗ್ರೆಸ್ ಅವರು ಹಾಳಾಗಿ ಹೋಗಿದ್ದಾರೆ. ದೇಶದಲ್ಲಿ ಈಗಾಗಲೇ ಹಾಳಾಗಿ ಹೋಗಿರುವ ಕಾಂಗ್ರೆಸ್‌ನವರನ್ನು ಪುನಃ ಈ ಮಸೀದಿ, ಮಂದಿರ ಪ್ರಸ್ತಾಪಿಸಿ ಅವರನ್ನು ಏಕೆ ಬೇಜಾರುಪಡಿಸುತ್ತೀರಿ? ಅವರು ಮರೆತಿದ್ದಾರೆ. ಆ ವಿಷಯ ಬಿಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್:- ಕಾಂಗ್ರೆಸ್‌ನವರು ಮಾತನಾಡಲಿಲ್ಲ, ಅವರು ಸುಮ್ಮನೆ ಕುಳಿತುಕೊಂಡಿದ್ದಾರೆ. ಅದರೆ ಇವರು ಹೇಳುವುದು ನೋಡಿ.

ಅಧ್ಯಕ್ಷರು: ಬಹಳಷ್ಟು ಸಲ ಈ ಸದನದಲ್ಲಿ ಆ ರೀತಿ ಆಗುತ್ತದೆ. ದಯಮಾಡಿ ಅದನ್ನು ಎಲ್ಲಾ ತಾವು ಕಳುಹಿಸಿ ಕೊಡಿ, ನಾನು ವೈಪಿಷ್ಯ ಮಾಡುತ್ತೇನೆ. ಪ್ರೊಸೀಡಿಂಗ್ಸ್‌ನಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ ನಾನು ವಿಚಾರ ಮಾಡಿ ನಾನು ನಂತರ ತಮ್ಮನ್ನು ಕರೆಯುತ್ತೇನೆ.

ಬಾದಾಮಿ ಸಾರಿಗೆ ಡಿಪೋದಲ್ಲಿ ಸಿಬ್ಬಂದಿ ಕೊರತೆ

48 (179) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಸಾರಿಗೆ ಡಿಪೋದಲ್ಲಿ ಕಂಡಕ್ಟರುಗಳು, ಮೆಕ್ಯಾನಿಕ್ ಹಾಗೂ ಇನ್ನಿತರ ಸಿಬ್ಬಂದಿ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಿಬ್ಬಂದಿಯನ್ನು ತುಂಬಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? ಹಾಗಾದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಹೌದು

ಆ) ವಿವಿಧ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಚುನಾವಣೆ ಪ್ರಯುಕ್ತ ಸ್ಥಗಿತಗೊಳಿಸಲಾಗಿತ್ತು. ಇನ್ನು ಮುಂದೆ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ನಮ್ಮ ಬಾದಾಮಿ ಸಾರಿಗೆ ಡಿಪೋದಲ್ಲಿ, ಕಂಡಕ್ಟರುಗಳು, ಚಾಲಕರು, ಮೆಕ್ಯಾನಿಕ್‌ನವರು ಎಷ್ಟು ಸ್ಯಾಂಕ್ಷನ್ ಪೋಸ್ಟ ಇದೆ? ಎಷ್ಟು ಫಿಲಪ್ ಮಾಡಿದ್ದೀರಿ? ಉಳಿದಿರುವ ಪೋಸ್ಟ್‌ಗಳನ್ನು ಯಾವಾಗ ತುಂಬುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಾದಾಮಿಯಲ್ಲಿ ಖಾಯಂ ಕಂಡಕ್ಟರುಗಳ ಸಂಖ್ಯೆ:161 ಮಂಜೂರಾಗಿದ್ದು, ಅಲ್ಲಿ ಈಗಾಗಲೇ ಕಾರ್ಯನಿರ್ವಹಿಸುವವರ ಸಂಖ್ಯೆ:154, ಅಂದರೆ 7 ಪೋಸ್ಟ್ ಖಾಲಿ ಇದೆ. ಬಾಕಿ ಖಾರು ಪತ್ತುದಾರರು, ಕುಶಲಕರ್ಮಿಗಳು ಇವೆಲ್ಲಾ ಒಂದೊಂದು ಪೋಸ್ಟ್ ಜಾಗ ಖಾಲಿ ಇದೆ. ಸಹಾಯಕ-ಎ:7 ಖಾಲಿ ಇವೆ. ಒಟ್ಟು ಬಾದಾಮಿಯಲ್ಲಿ 7 ನಿರ್ವಾಹಕರು, ಇತರೆ ಸಿಬ್ಬಂದಿ ವರ್ಗದವರು 21, ಹುದ್ದೆಗಳು ಖಾಲಿ ಇರೆ. ಏಕೆಂದರೆ ಕಳೆದ ಮೂರು ತಿಂಗಳಲ್ಲಿ ಚುನಾವಣೆ ಪ್ರಕ್ರಿಯೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಿಕ್ರೂಟ್‌ಮೆಂಟ್ ಮಾಡುವುದನ್ನು ಸದ್ಯಕ್ಕೆ ನಿಲ್ಲಿಸಲಾಗಿತ್ತು. ಆದ್ದರಿಂದ ಅವು ಖಾಲಿ ಉಳಿದಿವೆ. ಸ್ಯಾಂಕ್ಷನ್ ಕೊಟ್ಟಿದ್ದೇವೆ. ಇನ್ನೇನು ಚುನಾವಣೆಗಳು ಮುಗಿದಿರುವ ಹಿನ್ನೆಲೆಯಲ್ಲಿ ರಿಕ್ರೂಟ್‌ಮೆಂಟ್ ಪ್ರೋಸಸ್